

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–05–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّآ إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹುಝೂರ್ ಯಮಾಮ ಯುದ್ಧದ ಬಗ್ಗೆ ವಿವರಿಸುತ್ತಾ ಹೇಳಿದರು: ಯಮಾಮದಲ್ಲಿ ಮಹಾ ಪರಾಕ್ರಮಿ ಸಮುದಾಯವಾದ ಬನೂ ಹನೀಫ ನೆಲೆಸಿತ್ತು.

**"ಸತುದ್‌ಔನ ಇಲಾ ಖೌಮಿನ್ ಉಲೀ ಬಅ್‌ಸಿನ್ ಶದೀದಿನ್ ತುಖಾತಿಲೂನಹುಂ ಔ ಯುಸ್‌ಲಿಮೂನ್"** ಎಂದರೆ, "ಮಹಾ ಪರಾಕ್ರಮಶಾಲಿಗಳಾದ ಒಂದು ಜನಾಂಗದವರ ವಿರುದ್ಧ ನಿಮ್ಮನ್ನು ಕರೆಯಲಾಗುವುದು. ನೀವು ಅವರೊಡನೆ ಯುದ್ಧ ಮಾಡುವಿರಿ ಅಥವಾ ಅವರು ಮುಸ್ಲಿಮರಾಗುವರು." ಎಂಬ ಈ ವಚನವನ್ನು ವ್ಯಾಖ್ಯಾನಿಸುತ್ತಾ ತಫ್ಸೀರ್ ಖುರ್‌ತುಬಿಯಲ್ಲಿ ಹೀಗೆ ಬರೆಯಲಾಗಿದೆ: 'ನಾವು ಈ ವಚನವನ್ನು ಓದುತ್ತಿದ್ದೆವು. ಆದರೆ ಅವರು ಯಾರೆಂದು ನಮಗೆ ಗೊತ್ತಿರಲಿಲ್ಲ. ಕೊನೆಗೆ ಹಝ್ರತ್ ಅಬೂಬಕರ್(ರ) ಬನೂ ಹನೀಫರ ವಿರುದ್ಧ ಯುದ್ಧ ಮಾಡಲು ನಮ್ಮನ್ನು ಕರೆದಾಗ, ಈ ವಚನದಲ್ಲಿ ಈ ಸಮುದಾಯವನ್ನು ಉದ್ದೇಶಿಸಲಾಗಿತ್ತು ಎಂದು ನಮಗೆ ಗೊತ್ತಾಯಿತು ಎಂದು ರಾಫೀ ಬಿನ್ ಖದೀಜ್ ಹೇಳುತ್ತಾರೆ.'

ಹಝ್ರತ್ ಪೈಗಂಬರ್(ಸ) ಆರನೇ ಅಥವಾ ಏಳನೇ ಹಿಜರಿಯ ಆರಂಭದಲ್ಲಿ ವಿವಿಧ ಅರಸರಿಗೆ ತಬ್ಲೀಗ್ ಸಂಬಂಧಿ ಪತ್ರಗಳನ್ನು ಬರೆದಾಗ ಒಂದು ಪತ್ರವನ್ನು ಯಮಾಮದ ಅರಸನಾದ ಹೌಝ ಬಿನ್ ಅಲಿ ಮತ್ತು ಯಮಾಮ ನಿವಾಸಿಗಳ ಹೆಸರಲ್ಲೂ ಬರೆದಿದ್ದರು.

ಹಿಜರೀ 9ರಲ್ಲಿ ಅನೇಕ ಸಂಘಗಳ ಹಾಗೆಯೇ ಬನೂ ಹನೀಫದ ಒಂದು ಸಂಘ ಕೂಡ ಮದೀನಕ್ಕೆ ಬಂತು. ಆ ಸಂಘದಲ್ಲಿ ಮುಜಾಅ ಬಿನ್ ಮುರಾರ, ರಜ್ಜಾಲ್ ಬಿನ್ ಉನ್‌ಫುವಃ, ಮುಸೈಲಿಮ ಕದ್ಧಾಬ್ ಕೂಡ ಇದ್ದರು. ಬನೂ ನಜಾರಿನ ಒಬ್ಬ ಅನ್ಸಾರೀ ಸ್ತ್ರೀಯಾದ ರಮ್ಲ ಬಿನ್ ಹಾರಿಸಳ ದೊಡ್ಡ ಮನೆಯಲ್ಲಿ ಈ ಸಂಘ ತಂಗಿತು. ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಮಾಡಲು ವಿವಿಧ ಕಡೆಗಳಿಂದ ಸಂಘಗಳು ನಿರಂತರವಾಗಿ ಮದೀನಕ್ಕೆ ಬರಲು ಆರಂಭಿಸಿದಾಗ ಆ ಸಂಘಗಳಿಗೆ ತಂಗಲು ಅದೇ ಮನೆಯನ್ನು ಅವರು ನಿಶ್ಚಯಿಸಿದ್ದರು. ಮೊದಲು ಪ್ರಸ್ತಾಪಿಸಲಾದ ಸಂಘವು ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಹೋದಾಗ ಮುಸೈಲಿಮನಿಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಇದಕ್ಕೆ ತದ್ವಿರುದ್ಧವಾಗಿಯೂ ವರದಿಗಳು ಇವೆ. ಮುಸೈಲಿಮ ಭೇಟಿಯಾಗಿದ್ದರು ಎಂದೂ ಕೆಲವು ವರದಿಗಳಲ್ಲಿ ಬಂದಿದೆ. ಎರಡನೇ ಬಾರಿ ಬಂದಾಗ ಭೇಟಿಯಾಗಿರಬಹುದು ಎಂದೂ ಹೇಳಲಾಗುತ್ತದೆ.

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಮುಸೈಲಿಮ ಕದ್ಧಾಬ್ ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಮದೀನಕ್ಕೆ ಬಂದನು. ಅವನು ಹೇಳಿದನು: ಹಝ್ರತ್ ಪೈಗಂಬರ್(ಸ) ನನ್ನನ್ನು ಅವರ ನಂತರ ಉತ್ತರಾಧಿಕಾರಿಯನ್ನಾಗಿ ಮಾಡುವುದಾದರೆ, ನಾನು ಅವರನ್ನು ಅನುಸರಿಸುವೆನು. ಹಝ್ರತ್ ಪೈಗಂಬರ್(ಸ) ಸ್ವತಃ ಅವನ ಬಳಿಗೆ ಹೋದರು. ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಖರ್ಜೂರದ ಒಂದು ಬೆತ್ತವಿತ್ತು. ಅವರು ಹೇಳಿದರು: ನನ್ನಿಂದ ನೀನು ಈ ಬೆತ್ತವನ್ನು ಬೇಡಿದರೂ ನಾನು ಅದನ್ನು ಸಹ ನಿನಗೆ ಕೊಡಲಾರೆನು. ನಿನಗೆ ಖಂಡಿತ ಅಲ್ಲಾಹನ ತೀರ್ಮಾನಕ್ಕಿಂತ ಮುಂದೆ ಹೋಗಲು ಸಾಧ್ಯವಲ್ಲ. ನೀನು ಬೆನ್ನು ತಿರುಗಿಸಿದರೆ ಅಲ್ಲಾಹನು ನಿನ್ನನ್ನು ಬೇರುಸಹಿತ ಕಿತ್ತು ಹಾಕುವನು. ನಾನು ಕನಸಿನಲ್ಲಿ ಕಂಡ ಅದೇ ವ್ಯಕ್ತಿ ನೀನಾಗಿರುವೆ ಎಂದು ನಾನು ಭಾವಿಸುತ್ತೇನೆ. ನಿನ್ನ ಬಗ್ಗೆ ಅನೇಕ ಸಂಗತಿಗಳನ್ನು ನನಗೆ ಕನಸಿನಲ್ಲಿ ತೋರಿಸಲಾಗಿತ್ತು.

ಹಝ್ರತ್ ಪೈಗಂಬರ್(ಸ)ರ ಈ ಕನಸಿನ ಬಗ್ಗೆ ಹಝ್ರತ್ ಇಬ್ನು ಅಬ್ಬಾಸ್(ರ) ಕೇಳಿದಾಗ ಹಝ್ರತ್ ಅಬೂ ಹುರೈರ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಒಮ್ಮೆ ನಾನು ನಿದ್ದೆ ಮಾಡುತ್ತಿದ್ದಾಗ ಕನಸಿನಲ್ಲಿ ನನ್ನ ಕೈಯಲ್ಲಿ ಚಿನ್ನದ ಎರಡು ಬಳೆಗಳನ್ನು ಕಂಡೆನು. ಆ ಅವಸ್ಥೆಯಿಂದ ನಾನು ಚಿಂತಿತನಾದೆ. ಅವುಗಳ ಮೇಲೆ ಊದಲು ನನ್ನೊಡನೆ ಕನಸಿನಲ್ಲೇ ದಿವ್ಯವಾಣಿ ಮೂಲಕ ತಿಳಿಸಲಾಯಿತು. ಆಗ ನಾನು ಅವುಗಳ ಮೇಲೆ ಊದಿದೆ. ಆಗ ಅವು ಹಾರಿಹೋದುವು. ನನ್ನ ನಂತರ ಬರಲಿರುವ ಎರಡು ಸುಳ್ಳು ವಾದಿಗಳ ಬಗ್ಗೆ ಇಲ್ಲಿ ಹೇಳಲಾಗಿದೆ ಎಂದು ನಾನು ಅದನ್ನು ವ್ಯಾಖ್ಯಾನಿಸಿದೆ. ವರದಿಗಾರರಾದ ಉಬೈದುಲ್ಲಾಹ್ ಹೇಳುತ್ತಾರೆ: ಅವರಲ್ಲಿ ಒಬ್ಬ ಅನ್ಸಿ ಆಗಿರುವನು. ಅವನನ್ನು ಫಿರೋಝ್ ಯಮನಿನಲ್ಲಿ ಕೊಂದು ಹಾಕಿದರು. ಮತ್ತೊಬ್ಬ ಮುಸೈಲಿಮ ಕದ್ಧಾಬ್.

ಈ ಸಂಘ ಮರಳಿ ಯಮಾಮಗೆ ತೆರಳಿದಾಗ ಅಲ್ಲಾಹನ ಶತ್ರುವಾದ ಮುಸೈಲಿಮ ಮುರ್ತದ್ ಆದನು ಮತ್ತು ನುಬುವ್ವತ್ ವಾದ ಮಾಡಿದನು. ನನ್ನನ್ನು ಕೂಡ ಹಝ್ರತ್ ಪೈಗಂಬರ್(ಸ)ರ ನುಬುವ್ವತ್ತಿನೊಂದಿಗೆ ಸಹಭಾಗಿಯನ್ನಾಗಿ ಮಾಡಲಾಗಿದೆ ಎಂದು ಹೇಳಿದನು. ಅವನು ತನ್ನ ಅನುಚರರೊಡನೆ ಹೀಗೆ ಕೇಳಿದನು: ನೀವು ನನ್ನ ಬಗ್ಗೆ ಹಝ್ರತ್ ಪೈಗಂಬರ್(ಸ)ರ ಮುಂದೆ ಪ್ರಸ್ತಾಪಿಸಿದಾಗ, ಸ್ಥಾನ ಮತ್ತು ಪದವಿಯಲ್ಲಿ ನಾನು ಅವರಿಗಿಂತ ಕಡಿಮೆಯೇನೂ ಅಲ್ಲವೆಂದು ಅವರು ಹೇಳಿರಲಿಲ್ಲವೇ? ಹಾಗೆ ಹೇಳಲು ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ) ನಬಿಯಾಗಿರುವರು ಎಂದು ಅವರಿಗೆ ಗೊತ್ತಿತ್ತು ಮತ್ತು ನನ್ನನ್ನು ಅವರ ನುಬುವ್ವತ್ತಿನಲ್ಲಿ ಸಹಭಾಗಿಯನ್ನಾಗಿ ಮಾಡಲಾಗಿತ್ತು.

ಅನಂತರ ಮುಸೈಲಿಮ ತನ್ನದೇ ಶರೀಅತ್ ಶುರುಮಾಡಿದನು. ಪವಿತ್ರ ಖುರ್‌ಆನಿನ ರೀತಿಯನ್ನು ನಕಲು ಮಾಡುತ್ತಾ ವಚನಗಳನ್ನು ರಚಿಸಲು ಶುರುಮಾಡಿದನು. ನಮಾಝ್

ನಿರ್ವಹಿಸಬೇಕಾಗಿಲ್ಲವೆಂದು ಹೇಳಿದನು. ಒಂದು ವರದಿ ಪ್ರಕಾರ ಅವನು ಇಶಾ ಮತ್ತು ಫಜ್ರ್ ನಮಾಝ್‌ಗಳನ್ನು ಕೊನೆಗೊಳಿಸಿದ್ದನು. ವ್ಯಭಿಚಾರ ಮತ್ತು ಮದ್ಯಪಾನವನ್ನು ಧರ್ಮಬದ್ಧಗೊಳಿಸಿದನು. ಅದರೊಂದಿಗೆ ಹಝ್ರತ್ ಪೈಗಂಬರ್(ಸ) ನಬಿಯಾಗಿರುವರು ಎಂದು ಕೂಡ ಸಾಕ್ಷ್ಯವಹಿಸಿಕೊಂಡನು. ಬನೂ ಹನೀಫದ ಜನರು ಅವನ ಮಾತನ್ನು ಒಪ್ಪಿದರು.

ಯಮಾಮ ನಿವಾಸಿಯಾದ ರಜ್ಜಾಲ್ ಬಿನ್ ಉನ್‌ಫುಅ ಮುಸೈಲಿಮನ ಜೊತೆಗೆ ಸೇರಿದ್ದು ಅವನ ಶಕ್ತಿ ವರ್ಧಿಸಲು ಮತ್ತೊಂದು ಕಾರಣವಾಗಿತ್ತು. ಹಝ್ರತ್ ಪೈಗಂಬರ್(ಸ)ರ ಹಿಜ್ರತಿನ ನಂತರ ರಜ್ಜಾಲ್ ಮದೀನಕ್ಕೆ ಬಂದಿದ್ದನು. ಅಲ್ಲಿ ಅವನು ಪವಿತ್ರ ಖುರ್‌ಆನ್ ಕಲಿತನು ಮತ್ತು ಧಾರ್ಮಿಕ ಶಿಕ್ಷಣವನ್ನು ಗಳಿಸಿದನು. ಮುಸೈಲಿಮ ಧರ್ಮತ್ಯಾಗ ಮಾಡಿದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಯಮಾಮ ನಿವಾಸಿಗಳ ಕಡೆಗೆ ಬೋಧಕನಾಗಿ ಮತ್ತು ಮುಸೈಲಿಮನನ್ನು ಅನುಸರಿಸುವುದರಿಂದ ಜನರನ್ನು ತಡೆಯಲಿಕ್ಕಾಗಿ ಕಳುಹಿಸಿದ್ದರು. ಆದರೆ ಅದು ಅದಕ್ಕಿಂತ ದೊಡ್ಡದಾದ ಪಿತೂರಿಗೆ ಕಾರಣವಾಯಿತು. ಮುಸೈಲಿಮನ ಸುಳ್ಳುಪ್ರವಾದಿತ್ವ ವಾದವನ್ನು ಅವನು ಒಪ್ಪಿದನು. ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರ ಜೊತೆಗೆ ನುಬುವ್ವತ್ತಿನಲ್ಲಿ ಮುಸೈಲಿಮ ಕೂಡ ಸಹಭಾಗಿಯಾಗಿರುವನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಒಂದು ಸುಳ್ಳು ಮಾತನ್ನು ಕೂಡ ಹೇಳಿದನು. ಹಝ್ರತ್ ಪೈಗಂಬರ್(ಸ)ರ ಸಂಗಡಿಗರಲ್ಲಿ ಒಬ್ಬನೂ ಜನರಿಗೆ ಪವಿತ್ರ ಖುರ್‌ಆನನ್ನು ಕಲಿಸುವವನೂ ಆದ ಒಬ್ಬ ವ್ಯಕ್ತಿಯು ಮುಸೈಲಿಮನ ನುಬುವ್ವತಿಗೆ ಸಾಕ್ಷಿ ಹೇಳುತ್ತಿರುವುದಾಗಿ ಯಮಾಮದ ಜನರು ಕಂಡಾಗ ಅವರಿಗೆ ಮುಸೈಲಿಮನ ನುಬುವ್ವತ್ತನ್ನು ನಿರಾಕರಿಸಲು ಯಾವುದೇ ಕಾರಣವಿರಲಿಲ್ಲ. ಜನರು ಗುಂಪುಗುಂಪಾಗಿ ಮುಸೈಲಿಮನ ಬಳಿಗೆ ಬಂದು ಅವನ ಬೈಅತ್ ಮಾಡಲು ಶುರುಮಾಡಿದರು.

ಹಝ್ರತ್ ಪೈಗಂಬರ್(ಸ)ರಿಗೆ ಮುಸೈಲಿಮ ಒಂದು ಪತ್ರವನ್ನು ಕೂಡ ಬರೆದನು. ಅದರಲ್ಲಿ ಹೀಗೆ ಬರೆಯಲಾಗಿತ್ತು: ಅಲ್ಲಾಹನ ಪ್ರವಾದಿ ಮುಸೈಲಿಮನ ಕಡೆಯಿಂದ ರಸೂಲುಲ್ಲಾಹ್(ಸ)ರಿಗೆ, ಅರ್ಧ ಭೂಸ್ವತ್ತು ನಮ್ಮದು ಮತ್ತು ಅರ್ಧ ಖುರೈಶಿಗಳದ್ದು. ಆದರೆ ಖುರೈಶ್ ನ್ಯಾಯಪಾಲನೆ ಮಾಡುತ್ತಿಲ್ಲ ಎಂದು ಬರೆದಿದ್ದನು. ಅದಕ್ಕೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) ಅವನಿಗೆ ಹೀಗೆ ಪತ್ರ ಬರೆದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಮುಹಮ್ಮದ್ ನಬಿ(ಸ)ರ ಕಡೆಯಿಂದ ಮುಸೈಲಿಮ ಕಧ್ಧಾಬ್‌ನಿಗೆ, ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನು ತನ್ನ ದಾಸರಲ್ಲಿ ತಾನು ಬಯಸಿದ ಜನರನ್ನು ಅದರ ವಾರಸುದಾರರನ್ನಾಗಿ ಮಾಡುವನು. ಉತ್ತಮ ಅಂತ್ಯ ಮುತ್ತಖಿಗಳಾದ ಜನರದ್ದೇ ಆಗಿರುವುದು. ಸನ್ಮಾರ್ಗವನ್ನು ಅನುಸರಿಸುವವರ ಮೇಲೆ ಸಮಾಧಾನವಿರಲಿ.

ಹಝ್ರತ್ ಪೈಗಂಬರ್(ಸ)ರ ಈ ಪತ್ರವನ್ನು ಹಬೀಬ್ ಬಿನ್ ಝೈದ್ ಅನ್ಸಾರಿ ಕೊಂಡುಹೋಗಿದ್ದರು. ಹಬೀಬ್ ಆ ಪತ್ರವನ್ನು ಮುಸೈಲಿಮನಿಗೆ ಕೊಟ್ಟಾಗ ಅವನು ಕೇಳಿದನು: ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರು ಎಂಬುದಕ್ಕೆ ನೀನು ಸಾಕ್ಷ್ಯವಹಿಸುತ್ತೀಯ? ಹೌದೆಂದು ಉತ್ತರಿಸಲಾಯಿತು. ಅನಂತರ ಅವನು ಕೇಳಿದನು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಎಂಬುದಕ್ಕೆ ನೀನು ಸಾಕ್ಷ್ಯವಹಿಸುತ್ತೀಯ? ಹಬೀಬ್ ಹೇಳಿದರು: ನಾನು ಕಿವುಡ, ನನಗೆ ಆಲಿಸಲು ಆಗುತ್ತಿಲ್ಲ. ಮುಸೈಲಿಮ ಮಾತು ಬದಲಾಯಿಸಿದನು. ಮುಸೈಲಿಮ ಪದೇ ಪದೇ ಇದೇ ಸವಾಲನ್ನು ಕೇಳುತ್ತಿದ್ದನು. ಅವನು ಕೂಡ ನಬಿಯಾಗಿರುವನು ಎಂಬುದನ್ನು ಹಬೀಬ್ ಒಪ್ಪಬೇಕೆಂದು ಅವನು ಬಯಸುತ್ತಿದ್ದನು. ತಾನು ಬಯಸಿದ ಉತ್ತರ ಲಭಿಸದಿದ್ದಾಗ ಅವನು ಹಬೀಬರ ದೇಹದ ಒಂದು ಅಂಗವನ್ನು ಕತ್ತರಿಸುತ್ತಿದ್ದನು. ಹಝ್ರತ್ ಹಬೀಬ್(ರ) ಸಹನೆ ಮತ್ತು ಸ್ಥಿರಚಿತ್ತತೆಯ ಪರ್ವತವಾಗಿ ನಿಂತಿದ್ದರು. ಕೊನೆಗೆ ಅವನು ಅವರನ್ನು ತುಂಡುತುಂಡನ್ನಾಗಿ ಮಾಡಿದನು. ಅವನ ಮುಂದೆ ಹಝ್ರತ್ ಹಬೀಬ್(ರ) ಶಹಾದತಿನ ಪಾನೀಯವನ್ನು ಕುಡಿದರು.

ಅವನದ್ದು ಪ್ರವಾದಿತ್ವ ವಾದ ಮಾತ್ರವಾಗಿರಲಿಲ್ಲ. ಬದಲಾಗಿ ಅವನನ್ನು ನಬಿಯೆಂದು ನಂಬದವರೊಡನೆ ಅವನು ಈ ರೀತಿಯಾಗಿ ದೌರ್ಜನ್ಯದಿಂದ ವರ್ತಿಸಿದನು. ಯಮಾಮದಲ್ಲಿ ಮುಸೈಲಿಮ ದಂಗೆಯ ಬಾವುಟವನ್ನು ಎತ್ತಿದನು. ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಯಾದ ಹಝ್ರತ್ ಸಮಾಮ ಬಿನ್ ಅಸಾಲರನ್ನು ಮುಸೈಲಿಮ ಯಮಾಮದಿಂದ ಹೊರಕ್ಕೆ ಅಟ್ಟಿದನು. ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳ ಕಡೆಗೆ ಅನೇಕ ಸೇನೆಗಳನ್ನು ಕಳುಹಿಸಿದಾಗ ಹಝ್ರತ್ ಇಕ್ರಿಮ(ರ)ರ ನೇತೃತ್ವದಲ್ಲಿ ಒಂದು ಸೇನೆಯನ್ನು ಮುಸೈಲಿಮನ ಕಡೆಗೂ ಕಳುಹಿಸಿದರು. ಇಕ್ರಿಮರ ಸೈನ್ಯದ ಸಹಾಯಕ್ಕಾಗಿ ಅವರ ಹಿಂದೆ ಹಝ್ರತ್ ಶರಹ್‌ಬೀಲ್ ಬಿನ್ ಹಸನರನ್ನು ಕಳುಹಿಸಿದರು. ಶರಹ್‌ಬೀಲ್ ತಲುಪುವುದಕ್ಕೆ ಮುಂಚಿತವಾಗಿ ಮುಸೈಲಿಮನೊಡನೆ ಯುದ್ಧವನ್ನು ಆರಂಭಿಸಬಾರದು ಎಂದು ಹಝ್ರತ್ ಅಬೂಬಕರ್(ರ) ಹಝ್ರತ್ ಇಕ್ರಿಮರನ್ನು ತಾಕೀತು ಮಾಡಿದ್ದರು. ಆದರೆ ಇಕ್ರಿಮ(ರ) ಅವಸರಪಟ್ಟರು ಮತ್ತು ವಿಜಯದ ಗರಿ ತನಗೆ ಸಿಗಲಿಕ್ಕಾಗಿ ಶರಹ್‌ಬೀಲ್(ರ) ತಲುಪುವುದಕ್ಕೆ ಮುಂಚಿತವಾಗಿಯೇ ಯಮಾಮ ನಿವಾಸಿಗಳ ಮೇಲೆ ದಾಳಿ ನಡೆಸಿದರು. ಆದರೆ ಅವರು ವಿಪತ್ತಿಗೆ ಸಿಲುಕಿಕೊಂಡು ಸೋಲನ್ನು ಅನುಭವಿಸಬೇಕಾಯಿತು. ಯಾವುದಾದರೂ ಹೊಸ ಆದೇಶ ಕಳುಹಿಸಲಾಗುವ ತನಕ ಅಲ್ಲೇ ಇರಲು ಹಝ್ರತ್ ಅಬೂಬಕರ್(ರ) ಹಝ್ರತ್ ಶರಹ್‌ಬೀಲ್(ರ)ರೊಡನೆ ಹೇಳಿದರು.

ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಮುಸೈಲಿಮನ ಕಡೆಗೆ ಕಳುಹಿಸಿದರು. ಅದಲ್ಲದೆಯೂ ಅವರ ನೆರವಿಗಾಗಿ ಹಝ್ರತ್ ಸಲೀದ್(ರ)ರ ನೇತೃತ್ವದಲ್ಲಿ ಹೆಚ್ಚಿನ ಸಹಾಯಕ ಸೇನೆಯನ್ನೂ ಕಳುಹಿಸಿದರು. ಅವರ ಜೊತೆಗೆ ಸೇರಿಕೊಂಡು ಯುದ್ಧ ಮಾಡಲಿಕ್ಕಾಗಿ ಮುಹಾಜಿರ್ ಮತ್ತು ಅನ್ಸಾರರ ಒಂದು ಸಂಘವನ್ನು ಕೂಡ ಕಳುಹಿಸಿದರು. ಬುತಾಹ್ ಎಂಬ ಪ್ರದೇಶದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಈ ಸೇನೆ ಬರುವುದನ್ನು ಕಾಯುತ್ತಿದ್ದರು. ಅವರೆಲ್ಲರೂ ಖಾಲಿದ್(ರ)ರ ಬಳಿಗೆ ತಲುಪಿದಾಗ ಅವರು ಯಮಾಮದ ಕಡೆಗೆ ಹೊರಟರು.

ಯುದ್ಧ ಶುರುವಾಗುವುದಕ್ಕೆ ಮುಂಚಿತವಾಗಿಯೇ ಮುಸ್ಲಿಮರು ಬನೂ ಹನೀಫದ ಒಬ್ಬ ಸರದಾರನನ್ನು ಬಂಧಿಸಿದರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಬನೂ ಹನೀಫದ ಒಬ್ಬ ಸರದಾರನಾದ ಮುಜಾಅ ಬಿನ್ ಮುರಾರ ಎಂಬವನು ಒಂದು ಗುಂಪಿನ ಜೊತೆಗೆ ಹೊರಟಾಗ ಮುಸ್ಲಿಮರು ಅವನನ್ನು ಮತ್ತು ಅವನ ಜೊತೆಗಾರರನ್ನು ಹಿಡಿಗೂಡಿದರು. ಹಝ್ರತ್ ಖಾಲಿದ್(ರ)

ಅವನ ಸಂಗಡಿಗರನ್ನು ವಧಿಸಿದರು. ಅವರಲ್ಲೇ ಒಬ್ಬನಾದ ಸಾರಿಯ ಬಿನ್ ಮುಸೈಲಿಮ ಬಿನ್ ಆಮಿರ್ ಹೀಗೆ ಸಲಹೆ ನೀಡಿದನು: ಹೇ ಖ಼ಾಲಿದ್, ನೀನು ಯಮಾಮ ನಿವಾಸಿಗಳಿಗೆ ಸಂಬಂಧಪಟ್ಟು ಏನಾದರೂ ಒಳಿತು ಅಥವಾ ಕೆಟ್ಟದ್ದನ್ನು ಬಯಸುವುದಾದರೆ ಮುಜಾಅನನ್ನು ಜೀವಂತವಾಗಿ ಉಳಿಸು. ಏಕೆಂದರೆ ಅವನು ಯುದ್ಧ ಮತ್ತು ಶಾಂತಿಯ ವೇಳೆ ನಿನ್ನ ಸಹಾಯಕನಾಗುವನು. ಖಾಲಿದ್[ರ]ರಿಗೆ ಅವನ ಮಾತು ಹಿಡಿಸಿತು ಮತ್ತು ಮುಜಾಅನನ್ನು ವಧಿಸಲಿಲ್ಲ ಹಾಗೂ ಸಾರಿಯನನ್ನು ಕೂಡ ಜೀವಂತವಾಗಿ ಉಳಿಸಿದರು.

ಹಝ್ರತ್ ಖ಼ಾಲಿದ್[ರ] ಯಮಾಮದ ಕಡೆಗೆ ಹೊರಟರು ಮತ್ತು ಶಕ್ತವಾದ ಯೋಜನೆಯ ಏರ್ಪಾಡು ಮಾಡಿದರು. ಅವರು ಹಝ್ರತ್ ಶುರಹ್‌ಬೀಲ್ ಬಿನ್ ಹಸನರನ್ನು ಮುಂದಕ್ಕೆ ಕಳುಹಿಸಿದರು. ಇಸ್ಲಾಮಿನ ಸೈನ್ಯವನ್ನು ಐದು ಭಾಗಗಳನ್ನಾಗಿ ವಿಂಗಡಿಸಿದರು. ಅದು ಯುದ್ಧಕ್ಕಿಂತ ಮುಂಚಿತವಾಗಿ ಮಾಡಲಾಗುವ ಕೊನೆಯ ಕ್ರಮವಾಗಿತ್ತು. ಮುಸೈಲಿಮನ ಸಹಾಯಕ್ಕಾಗಿ ಇದ್ದ ಯೋಧರ ಸಂಖ್ಯೆ 40 ಸಾವಿರ ಅಥವಾ ಮತ್ತೊಂದು ವರದಿ ಪ್ರಕಾರ ಒಂದು ಲಕ್ಷ ಅಥವಾ ಅದಕ್ಕಿಂತ ಹೆಚ್ಚಾಗಿತ್ತು. ಆದರೆ ಮುಸ್ಲಿಮರು 10 ಸಾವಿರಕ್ಕಿಂತ ಸ್ವಲ್ಪ ಹೆಚ್ಚಿದ್ದರು. ಬನೂ ಹನೀಫ ಮತ್ತು ಮುಸ್ಲಿಮರ ನಡುವೆ ಅಖ್‌ರಬದ ಪ್ರದೇಶದಲ್ಲಿ ಘೋರವಾದ ಯುದ್ಧ ನಡೆಯಿತು. ಮುಸ್ಲಿಮರಿಗೆ ಇದಕ್ಕಿಂತ ಮೊದಲು ಇಂತಹ ಯುದ್ಧವನ್ನು ಮಾಡಬೇಕಾಗಿ ಬಂದಿರಲಿಲ್ಲ. ಮುಸ್ಲಿಮರು ಹಿಂದಕ್ಕೆ ಸರಿದರು. ಇಸ್ಲಾಮಿನ ಸೇನೆ ಹಿಂದಕ್ಕೆ ಸರಿದರೂ ಹಝ್ರತ್ ಖ಼ಾಲಿದ್ ಬಿನ್ ವಲೀದ್[ರ]ರ ದೃಢನಿಶ್ಚಯ, ಸ್ಥೈರ್ಯ, ಧೈರ್ಯ ಮತ್ತು ಸ್ಥಿರಚಿತ್ತತೆಯಲ್ಲಿ ಅಲ್ಪವೂ ನಡುಕ ಉಂಟಾಗಲಿಲ್ಲ. ಅವರು ಕೂಗುತ್ತಾ ತನ್ನ ಸೈನ್ಯದೊಡನೆ ಹೇಳಿದರು: ಎಲೈ ಮುಸ್ಲಿಮರೇ, ಯಾವ ಗೋತ್ರದವರು ಯುದ್ಧದಲ್ಲಿ ಅತ್ಯಂತ ಶೌರ್ಯವನ್ನು ತೋರಿಸಿದೆ ಎಂದು ಗೊತ್ತಾಗಲು ನೀವು ಬೇರೆ ಬೇರೆಯಾಗಿ ನಿಲ್ಲಿರಿ. ಈ ಘೋಷಣೆಯಿಂದ ಎಲ್ಲ ಗೋತ್ರಗಳೊಳಗೆ ಅವರು ಒಂದು ಹೊಸ ಚೈತನ್ಯ ಮತ್ತು ಸ್ಪರ್ಧಾ ಮನೋಭಾವವನ್ನು ಉಂಟುಮಾಡಿದರು.

ಯುದ್ಧ ಮಾಡಲಿಕ್ಕಾಗಿ ಶ್ರೇಷ್ಠ ಸಹಾಬಿಯರು ಪರಸ್ಪರ ಪ್ರೇರೇಪಿಸಲು ಶುರುಮಾಡಿದರು. ಅವರು ಹೀಗೆ ಹೇಳಿದರು: ಎಲೈ ಸೂರಃ ಬಖರಃದವರೇ, ಇಂದು ಜಾದೂ ನಿಷ್ಫಲವಾಯಿತು. ಹಝ್ರತ್ ಸಾಬಿತ್ ಬಿನ್ ಖೈಸ್[ರ] ಮೊಣಕಾಲು ತನಕ ಹೊಂಡವನ್ನು ಅಗೆದರು ಮತ್ತು ತನ್ನನ್ನು ತಾನೇ ಅದರಲ್ಲಿ ಹೂತುಹಾಕಿದರು. ಅವರು ಅನ್ಸಾರರ ಧ್ವಜವನ್ನು ಎತ್ತಿಕೊಂಡಿದ್ದರು ಮತ್ತು ಅವರು ಹನೂತನ್ನು ಸವರಿಕೊಂಡಿದ್ದರು. (ಹನೂತ್ ಎಂಬುದು ಮೃತದೇಹದ ಮೇಲೆ ಸವರಲಾಗುವ ಒಂದು ಸುಗಂಧದ್ರವ್ಯವಾಗಿದೆ) ಮರಣದ ನಂತರ ಜನರು ಅವರ ಜೊತೆಗೆ ಮಾಡಲಿರುವ ಕೆಲಸವನ್ನು ಅವರು ಸ್ವತಃ ಮಾಡಿಕೊಂಡಿರುವರು ಮತ್ತು ಅವರು ಸಾಯಲು ತಯಾರಿರುವರು ಎಂಬುದಾಗಿ ಅವರು ಈ ರೀತಿಯಾಗಿ ತೋರಿಸುತ್ತಿದ್ದರು. ಅವರು ಕಫನ್ ಕಟ್ಟಿಕೊಂಡು ಶತ್ರುಗಳ ಮುಂದೆ ಸ್ಥೈರ್ಯದಿಂದ ಇದ್ದರು ಮತ್ತು ಶಹೀದ್ ಆದರು ಎಂದು ವರದಿಯಾಗಿದೆ. ಇದರ ವಿವರಣೆ ಮುಂದುವರೆಯುವುದು. ಇನ್ಶಾ ಅಲ್ಲಾಹ್.

ಖುತ್ಬದ ಕೊನೆಯಲ್ಲಿ ಹುಝೂರ್ ಪಾಕಿಸ್ತಾನದ ಓಕಾಡದ ಮಾಸ್ಟರ್ ಮುನವ್ವರ್ ಅಹ್ಮದ್ ಸಾಹಿಬ್‌ರ ಮಗನಾದ ಸನ್ಮಾನ್ಯ ಅಬ್ದುಸ್ಸಲಾಂ ಸಾಹಿಬ್ ಶಹೀದ್, ಫೈಸಲಾಬಾದಿನ ಶೇಖ್ ಸಈದುಲ್ಲಾಹ್ ಸಾಹಿಬ್‌ರ ಮಗನಾದ ಝುಲ್‌ಫಿಕಾರ್ ಅಹ್ಮದ್ ಸಾಹಿಬ್ ಮತ್ತು ಕೆನಡದ ಮಲಿಕ್ ತಬಸ್ಸುಂ ಮಖ್ಸೂದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ಼ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis**(atba)*

*At, Masjid Mubarak, Islamabad, Tilford, UK, On 20-05-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon